'ನೀನು ಮೊದಲೇ ಹೇಳಬೇಕಿತ್ತು ಟ್ರೆವರ್, ನನ್ನನ್ನು ನಾನು ಅಷ್ಟು ಮೂರ್ಖನನ್ನಾಗಿ ಮಾಡಿಕೊಳ್ಳಬೇಕಾಗಿರಲಿಲ್ಲ' ಎಂದು ಹಗಿ ಮುನಿಸಿಕೊಂಡು ಹೇಳಿದನು.

'ಸರಿಯಾಗಿ ಹೇಳಬೇಕೆಂದರೆ ಹಗಿ, ನೀನು ಹಿಂದು ಮುಂದೆ ನೋಡದೆ ಆ ರೀತಿ ಭಿಕ್ಷೆ ನೀಡಲು ಹೋಗುವೆಯೆಂಬುದು ನನ್ನ ತಲೆಯನ್ನು ಹೊಕ್ಕಿರಲಿಲ್ಲ. ನೀನು ಸುಂದರವಾದ ಮಾಡೆಲ್ ಅನ್ನು ಮುತ್ತಿಟ್ಟರೆ ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಕೊಳಕಾಗಿರುವವನಿಗೆ ನೀನು ಸವರನ್ ಕೊಡುವುದು– ಅದಿಷ್ಟೆ ಅಲ್ಲದೆ ನಿಜದ ವಿಷಯವೆಂದರೆ ಆ ಹೊತ್ತು ನಾನು ಸಮಾಧಾನದ ಸ್ಥಿತಿಯಲ್ಲೇ ಇರಲಿಲ್ಲ. ನೀನು ಒಳಕ್ಕೆ ಬಂದಾಗ, ಹಾಸ್‌ಬರ್ಗ್ ಹೆಸರು ಹೇಳುವುದು ಆತನಿಗೆ ಇಷ್ಟವಾಗುತ್ತದೋ ಇಲ್ಲವೋ ನನಗೆ ಗೊತ್ತಾಗಲಿಲ್ಲ. ನಿನಗೆ ತಿಳಿದಂತೆಯೇ ಆತ ಪೂರ್ಣವಾಗಿ ಬಟ್ಟೆ ತೊಟ್ಟಿರಲಿಲ್ಲ' ಎಂದನು ಟ್ರೆವರ್.

'ಆತ ನನ್ನನ್ನು ಎಂಥ ದಡ್ಡನೆಂದುಕೊಂಡಿರಬಹುದು?' ಎಂದು ಹಗಿ ಹೇಳಿದ.

'ಖಂಡಿತಾ ಇಲ್ಲ. ನೀನು ಹೊರಟು ಹೋದ ಮೇಲೆ ಆತ ತುಂಬಾ ಖುಷಿಯಲ್ಲೇ ಇದ್ದ. ಆತ ಒಳಗೊಳಗೋ ನಗುತ್ತಿದ್ದ ಹಾಗೇ ತನ್ನ ಸುಕ್ಕುಗಟ್ಟಿದ ಕೈಗಳೆರಡನ್ನೂ ಉಜ್ಜಿಕೊಳ್ಳುತ್ತಿದ್ದ. ಆತ ನಿನ್ನ ಬಗ್ಗೆ ಅಷ್ಟೇಕೆ ಆಸಕ್ತನಾಗಿದ್ದಾನೆಂಬುದು ನನಗೆ ತಿಳಿಯಲೇ ಇಲ್ಲ. ಈಗ ನನಗೆ ಗೊತ್ತಾಗುತ್ತಿದೆ. ಆತ ನಿನ್ನ ಸವರನ್ ಅನ್ನು ನಿನಗೋಸ್ಕರ ಹೂಡಿಕೆ ಮಾಡುತ್ತಾನೆ. ಹಾಗೇ ಪ್ರತಿ ಆರು ತಿಂಗಳಿಗೊಮ್ಮೆ ನಿನಗೆ ಬಡ್ಡಿಯನ್ನೂ ಕೊಡುತ್ತಾನೆ. ಊಟವಾದ ಮೇಲೆ ಇನ್ನೂ ಒಳ್ಳೆಯ ವಿಷಯ ಹೇಳುವುದಿದೆ' ಎಂದನು ಟ್ರೆವರ್.

'ನಾನೊಬ್ಬ ದುರದೃಷ್ಟದ ದೆವ್ವವೇ ಸರಿ' ಎಂದು ಹಗಿ ಗೊಣಗಿಕೊಂಡನು.

'ಈಗ ನಾನು ಮಾಡಬಹುದಾದ ಒಳ್ಳೆಯ ಕೆಲಸವೆಂದರೆ ನಿದ್ರೆ ಮಾಡುವುದು. ಸ್ನೇಹಿತನೇ, ಈ ವಿಷಯವನ್ನು ನೀನು ಯಾರಿಗೂ ಹೇಳಕೂಡದು. ಬೀದಿಯಲ್ಲಿ ಯಾರಿಗೂ ಮುಖ ತೋರಿಸಲೂ ಆಗುವುದಿಲ್ಲ.'

'ಏ ದಡ್ಡ, ಅದು ನೀನು ದಯಾಳುವಾಗಿರುವುದರ ಶ್ರೇಷ್ಠ ಗುಣವನ್ನು ತೋರಿಸುತ್ತದೆ. ಇರು ಓಡಿಹೋಗಬೇಡ. ಇನ್ನೊಂದು ಸಿಗರೇಟ್ ತಗೊ. ನೀನು ಲಾರಾ ಬಗ್ಗೆ ಎಷ್ಟು ಬೇಕಾದರೂ ಮಾತಾಡಬಹುದು.'

ಆದಾಗ್ಯೂ ಹಗಿ ಅಲ್ಲಿ ನಿಲ್ಲಲಿಲ್ಲ, ಮನೆಗೆ ಹೊರಟೇ ಹೋದನು. ಆತ ತುಂಬಾ ದುಃಖಿತನಾಗಿದ್ದ. ಅಲನ್ ಟ್ರೆವರ್ ಮಾತ್ರ ಗಹಿಗಹಿಸಿ ನಗುತ್ತಲೇ ಇದ್ದನು.

ಮಾರನೇದಿನ ಬೆಳಿಗ್ಗೆ ಹಗಿ ತಿಂಡಿ ತಿನ್ನುತ್ತಿರುವಾಗ, ಸೇವಕ ಒಂದು ಕಾರ್ಡ್ ಅನ್ನು ತಂದುಕೊಟ್ಟನು. ಅದರ ಮೇಲೆ ಮಾನ್ಸೂರ್ ಗುಸ್ತೇವ್ ನಾದಿನ್– ಮಾನ್ಯರಾದ ಬ್ಯಾರನ್ ಹಾಸ್‌ವರ್ಗ್...

'ಅವರು ಬಹುಶಃ ಕ್ಷಮೆ ಕೇಳಲು ಬಂದಿರಬಹುದೆಂದು ಕಾಣುತ್ತದೆ' ಎಂದು ಹಗಿ ತನ್ನಲ್ಲೇ ಹೇಳಿಕೊಂಡನು. ಬಂದಿರುವ ವ್ಯಕ್ತಿಗೆ ಮೇಲೆ ಬರುವಂತೆ ತಿಳಿಸಲು ಸೇವಕನಿಗೆ ಹೇಳಿದನು.

ಚಿನ್ನದ ಕನ್ನಡಕ ಧರಿಸಿದ, ಬೂದು ಕೂದಲಿನ ವಯಸ್ಸಾದ ಸಭ್ಯಸ್ಥರೊಬ್ಬರು ಕೋಣೆಯೊಳಕ್ಕೆ ಬಂದು, ಫ್ರೆಂಚ್ ಉಚ್ಚಾರಣೆಯಲ್ಲಿ ಕೇಳಿದರು. 'ನಾನು ಮಾನ್ಯರಾದ ಎರ್ಸ್‌ಕೈನ್ ಅವರ ಜೊತೆ ಮಾತಾಡಬಹುದೇ?' ಹಗಿ ಬಾಗಿದನು.

'ನಾನು ಬ್ಯಾರನ್ ಹಾಸ್‌ಬರ್ಗ್ ಅವರ ಕಡೆಯಿಂದ ಬಂದಿದ್ದೇನೆ' ಎಂದು ಮಾತು ಮುಂದುವರಿಸಿ' ಬ್ಯಾರನ್...